ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಂಗಳೂರು, ಶನಿವಾರ, ೦೭, ಮಾರ್ಚ್, ೨೦೨೬ (ಫಾಲ್ಗುಣ, ೧೬, ಶಕವರ್ಷ, ೧೯೪೭) BENGALURU, SATURDAY, 07, MARCH, 2026 (PHALGUNA , 16, SHAKAVARSHA, 1947)	ಸಂಚಿಕೆ ೪೭ Issue 47

ಭಾಗ ೩
ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕರ್ನಾಟಕ ಸರ್ಕಾರ
ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಲೇಖನ ಸಾಮಗ್ರಿ ಮಳಿಗೆ ಮೈಸೂರು ರಸ್ತೆ ಬೆಂಗಳೂರು-560059

No. DPS/STYA/ASVF/1/2026-ADS/2025-26/ 232 **Date : 02 -03-2026.**

ಅಧಿಸೂಚನೆ

ಮುದ್ರಣ ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆಯ ಕೇಂದ್ರ ಲೇಖನ ಸಾಮಗ್ರಿ ಮಳಿಗೆ ಬೆಂಗಳೂರು ಹಾಗೂ ಅಧೀನ ಕಛೇರಿಗಳಾದ ಸರ್ಕಾರಿ ವಿಭಾಗೀಯ ಮುದ್ರಣಾಲಯ ಮೈಸೂರು, ಧಾರವಾಡ, ಕಲಬುರಗಿ, ಕಛೇರಿಯ ಲೇಖನ ಸಾಮಗ್ರಿ ಮಳಿಗೆಗಳಲ್ಲಿ 2025-26ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನೆಯ ಪ್ರಯುಕ್ತ ದಿನಾಂಕ: 01-04-2026 ರಿಂದ 18-04-2026ರ ವರೆಗೆ ಎಲ್ಲಾ ಸರ್ಕಾರಿ ಹಾಗೂ ಅರೆ ಅರ್ಕಾರಿ ಕಛೇರಿಗಳಿಗೆ ಲೇಖನ ಸಾಮಗ್ರಿಗಳು ಹಾಗೂ ಕಾಗದಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂಬ ವಿಷಯವನ್ನು ಸಂಬಂಧಿಸಿದ ಎಲ್ಲಾ ಸರ್ಕಾರಿ ಹಾಗೂ ಅರೆ ಸರ್ಕಾರಿ ಕಛೇರಿಗಳಿಗೆ ಈ ಮೂಲಕ ತಿಳಿಸಲಾಗಿದೆ.

ಸಹಿ/-
ನಿರ್ದೇಶಕರು

GOVERNMENT OF KARNATAKA

OFFICE OF THE DIRECTOR OF PRINTING STATIONERY AND PUBLICATION

GOVERNMENT STATIONARY DEPOT MYSORE ROAD BANGALORE-560059

No. DPS/STYA/ASVF/1/2026-ADS/2025-26/232 **Date : 02-03-2026.**

NOTIFICATION

It is hereby notified for the information of all the Government and Quasi Government offices that there will be no issue of stationary articles and papers from the Government stationary depot Bangalore, Mysore, Kalaburagi, and Dharwad from the Date:01-04-2026 to 18-04-2026 (Both day inclusive) on account of Annual Stock Verification for the Year of 2025-26.

Sd/-
S. Vishwanath
Director

PR-389

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 113 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:03.03.2026

ಅಧಿಸೂಚನೆ

Karnataka Innovation and Technology Society ಯು SCSP/TSP ಅಡಿಯಲ್ಲಿ RISE (Rural Innovation and Sustainable Entrepreneurship) ಯೋಜನೆಯನ್ನು ಜಾರಿಗೆ ತರಲು FSID (The Foundation for Science, Innovation and Development) - IISc ಸಂಸ್ಥೆಯ ಸೇವೆಯನ್ನು 5 ವರ್ಷಗಳ ಅವಧಿಗೆ ಒಟ್ಟಾರೆ ರೂ.975.00 ಲಕ್ಷಗಳ ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-390

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 157 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:04.03.2026

ಅಧಿಸೂಚನೆ

ನಂ.1 ವಿ.ವಿ ಕೇಂದ್ರ ವ್ಯಾಪ್ತಿಯಲ್ಲಿ ಬರುವ ರಾಜಭವನ ಆವರಣದಲ್ಲಿನ ವಸತಿಗೃಹಗಳಲ್ಲಿ "PROVIDING WATER LEAKAGE, IMPROVEMENT TO TOILET, PAINTING TO B, C AND D QUARTERS AND OTHER EMERGENT WORKS AT RAJ BHAVAN, BENGALORE" ಕಾಮಗಾರಿಯನ್ನು ರೂ.45.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ

4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಲೋಕೋಪಯೋಗಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು, ಲೋಕೋಪಯೋಗಿ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-391

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 170 ವೆಚ್ಚ-12/2026

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ,
ಬೆಂಗಳೂರು, ದಿನಾಂಕ:04.03.2026

ಅಧಿಸೂಚನೆ

ನಾಗರೀಕ ವಿಮಾನಯಾನ ನೀತಿಯನ್ನು ಸಿದ್ದಪಡಿಸಲು ಮೆ.ಐಡೆಕ್ ಸಂಸ್ಥೆಯ ಸೇವೆಯನ್ನು ರೂ.11.80 ಲಕ್ಷಗಳ (GST ಒಳಗೊಂಡಂತೆ) ವೆಚ್ಚದಲ್ಲಿ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ-1999ರ ಕಲಂ 4(ಜಿ)ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ.

ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯು ದೃಢಪಡಿಸಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕಾಂತಮ್ಮ ಎನ್.ಎಂ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)

PR-392

ಕರ್ನಾಟಕ ಸರ್ಕಾರ

ತಹಶೀಲ್ದಾರ್ ರವರ ಕಾರ್ಯಾಲಯ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

ನಂ:ಕಂ.ಗ್ರಾಮ:ಸಿಆರ್:48/25-26 ದಿನಾಂಕ:03.03.2026

ನಮೂನೆ - 2-ಜೆ

[ನಿಯಮ 9-ಸಿ ಯ ಉಪ-ನಿಯಮದ (10)ನೇ ಉಪನಿಯಮವನ್ನು ನೋಡಿ]

ಅಧಿಸೂಚನೆ

ತುಮಕೂರು ಜಿಲ್ಲೆ, ಮಧುಗಿರಿ ಉಪವಿಭಾಗಾಧಿಕಾರಿಗಳು, ಮಧುಗಿರಿ ರವರ ಆದೇಶ ಸಂಖ್ಯೆ: ಕಂ.ಗ್ರಾ/ಖಾ/ಹಕ್ಕು ಪತ್ರ/ಶಿರಾ/ಸಿಆರ್:02/25-26. ದಿನಾಂಕ:26.02.2026 ರಂತೆ ಕರ್ನಾಟಕ ಭೂಸುಧಾರಣಾ ಅಧಿನಿಯಮದ (1961)38(ಎ) ಕಲಮಿನ (2) ನೇ ಉಪಕಲಮಿನ ಅಡಿಯಲ್ಲಿ ಆದೇಶವೊಂದನ್ನು ಜಾರಿ ಮಾಡಿದ್ದಾರೆ. ಅದರಂತೆ ಕೆಳಕಂಡಂತೆ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿ, ಮೇಗಲಹಟ್ಟಿ ಗ್ರಾಮದ ವಾಸಿಗಳು ವಾಸಗೃಹ ಮತ್ತು ಅದಕ್ಕೆ ಹೊಂದಿಕೊಂಡಿರುವ ಜಮೀನಿನ ಮಾಲೀಕರೆಂದು ಅವರ ಹೆಸರಿನಲ್ಲಿ ನೊಂದಾಯಿಸಲಾಗಿದೆ. ವಾಸಗೃಹ ಮತ್ತು ಅದಕ್ಕೆ ಹೊಂದಿಕೊಂಡ ಜಮೀನನ್ನು ಕೆಳಕಂಡಂತೆ ವಿವರಿಸಲಾಗಿದೆ.

ಕ್ರ ಸಂ	ಹೋಬಳಿ	ಮೂಲ ಕಂದಾಯ ಗ್ರಾಮದ ಹೆಸರು	ಉಪಗ್ರಾಮದ ಹೆಸರು	ಅರ್ಜಿದಾರರ ಹೆಸರು	ಸ.ನಂ	ಅಳತೆ (ಚ.ಅ) ಪೂ.ಪ.ಉ.ದ	ಗಡಿಗಳು			
							ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಓಬಳಮ್ಮ ಕೊಂ ಜಗನ್ನಾಥ್	43/3	26*31	ರಸ್ತೆ	ಉಳಿಕೆ	ರಸ್ತೆ	ಲೋಲಮ್ಮನ ಮನೆ
2	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಈರಣ್ಣ ಬಿನ್ ಲೇಟ್ ಐವಾತಪ್ಪ	43/3	26*29	ರಸ್ತೆ	ಹಿಡುವಳಿ ಜಮೀನು	ಓಬಳಮ್ಮನ ಮನೆ	ಖಾಲಿ ಜಾಗ
3	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಬಡಮಾರಪ್ಪ ಬಿನ್ ಯರ್ರಮಾದಪ್ಪ	43/3	40*19	ಖಾಲಿಜಾಗ	ಹಿಡುವಳಿ ಜಮೀನು	ಖಾಲಿಜಾಗ	ಹಿಡುವಳಿಜಮೀನು
4	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ರಾಮಕೃಷ್ಣಪ್ಪ ಬಿನ್ ಚನ್ನಪ್ಪ	43/23	30*32	ಗಲ್ಲಿ	ಉಳಿಕೆ ಜಾಗ	ರಸ್ತೆ	ಉಳಿಕೆಜಾಗ
5	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಪಾಲಕ್ಕ ಕೋಂ ರಾಮಣ್ಣ	43/26	40*15	ಉಳಿಕೆಜಾಗ	ಗಲ್ಲಿ	ರಸ್ತೆ	ಉಳಿಕೆಜಾಗ
6	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಶಾಂತಮ್ಮ ಕೋಂ ಎಮ್. ಕರಿಯಣ್ಣ	43*23	30*15	ಮಾರಣ್ಣನ ಮನೆ	ರಸ್ತೆ	ರಸ್ತೆ	ಉಳಿಕೆ ಜಾಗ
7	ಬುಕ್ಕಾಪಟ್ಟಣ	ಶಾಖದಡು	ಮೇಗಳಹಟ್ಟಿ	ಮಾರಣ್ಣ ಬಿನ್ ಲೇಟ್ ಕೋಡಗಪ್ಪ	43/23	25*22	ಉಳಿಕೆ ಜಾಗ	ಶಾಂತಮ್ಮನ ಮನೆ	ರಸ್ತೆ	ಉಳಿಕೆ ಜಾಗ

ತಹಶೀಲ್ದಾರ್
ಶಿರಾ ತಾಲ್ಲೂಕು

PR-393

ಕರ್ನಾಟಕ ಸರ್ಕಾರ

ಸಂಖ್ಯೆ: ಲಾ-ಎಲ್‌ಸಿಎಲ್/353/2025

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಡಾ|| ಬಿ. ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ : 05-03-2026.

ಅಧಿಸೂಚನೆ

ನೋಟರಿಗಳ ಅಧಿನಿಯಮ, 1952 ಹಾಗೂ ನೋಟರಿ ನಿಯಮಾವಳಿಗಳು, 1956ರ ನಿಯಮ 8 (1)ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ಸರ್ಕಾರವು ದಿನಾಂಕ : 18-04-2016ರ ಕೇಂದ್ರ ಸರ್ಕಾರದ ಕಾನೂನು ಮತ್ತು ನ್ಯಾಯ ಸಚಿವಾಲಯದ ತಿದ್ದುಪಡಿ ಅಧಿಸೂಚನೆ ಸಂಖ್ಯೆ GSR429E ರನ್ವಯ ನಿಯಮ 7(ಎ) ಉಪ ನಿಯಮ 2ರ ನಂತರ ಸೇರ್ಪಡೆ ಮಾಡಿರುವ ನಿಬಂಧನೆಯನ್ವಯ

ನೋಟರಿ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾದ ದಿನಾಂಕದಿಂದ ಜಾರಿಗೆ ಬರುವಂತೆ 05 (ಐದು) ವರ್ಷಗಳ ಅವಧಿಗೆ **ಶ್ರೀಮತಿ ಲಕ್ಷ್ಮೀ ಕಡಕೋಳ ತಂದೆ ಹಾದೇಪ್ಪ,** ವಕೀಲರು, ಅಟ್ ಪೋಸ್ಟ್ ಬಸವೇಶ್ವರ ನಗರ್, ಶಿಗ್ಗಾಂವ, ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ – 581 205 ಇವರನ್ನು **ಹಾವೇರಿ ಜಿಲ್ಲೆಯ ಶಿಗ್ಗಾಂವ ಕಂದಾಯ ತಾಲ್ಲೂಕಿಗೆ** ಹೆಚ್ಚುವರಿಯಾಗಿ ಸೃಜಿಸಿರುವ ಒಂದು ನೋಟರಿ ಹುದ್ದೆಗೆ ನೋಟರಿಯನ್ನಾಗಿ ನೇಮಿಸಲಾಗಿದೆ.

ಸದರಿ ವಕೀಲರು ಲೆಕ್ಕ ಶೀರ್ಷಿಕೆ 0070 – ಇತರೆ ಆಡಳಿತಾತ್ಮಕ ಸೇವೆಗಳು – 01 - ನ್ಯಾಯ ಪರಿಪಾಲನೆ – 501 – 0 – ಇತರೆ ಸ್ವೀಕೃತಿಗಳು -06 ಇತರೆ ಬಾಬ್ತುಗಳಿಗೆ (0070-01-501-0-06) ನೋಟರಿ ನಿಯಮಗಳಲ್ಲಿ ನಿಗಧಿಪಡಿಸಲಾದ ರೂ. 2,000-00 (ಎರಡು ಸಾವಿರ ರೂಪಾಯಿಗಳು ಮಾತ್ರ) ಗಳ ಶುಲ್ಕವನ್ನು ಸರ್ಕಾರಿ ಖಜಾನೆಯಲ್ಲಿ ಜಮೆ ಮಾಡಿ ಅದರ ಮೂಲ ಚಲನ್ ಮತ್ತು ಹುಟ್ಟಿದ ದಿನಾಂಕವನ್ನು ದೃಢೀಕರಿಸಬಲ್ಲ ದಾಖಲೆಯನ್ನು ಹಾಜರುಪಡಿಸಿದ ನಂತರ ನೋಟರಿ ವೃತ್ತಿ ಪ್ರಮಾಣ ಪತ್ರವನ್ನು ನೀಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಆದಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾನೂನು, ನ್ಯಾಯ ಮತ್ತು
ಮಾನವ ಹಕ್ಕುಗಳ ಇಲಾಖೆ (ಆಡಳಿತ-2).

PR-394

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ.16, 2ನೇ ರಾಜಭವನ ರಸ್ತೆ, ಪಿ.ಬಿ.ನಂ.5309, ಬೆಂಗಳೂರು-01
E-mail: directoramdgok@gmail.com, ದೂರವಾಣಿ ಸಂ:080-22867192

ಸಂ:ಕೃಮಾಇ/ನಿಯವಿ/288/ಉಮಾಪ್ರಾಂ/2025-26 ದಿನಾಂಕ: 03/03/2026

:: **ಅಧಿಸೂಚನೆ** ::

ಅಧಿಸೂಚನೆ ಸಂ:ಕೃಮಾಇ/23/ನಿಯವಿ/2003, ದಿ:14/07/2003ರ ಮೂಲಕ ಸಿಂಗೇನ ಅಗ್ರಹಾರ ಗ್ರಾಮದ ಪರಿಮಿತಿಯೊಳಗಿನ ಪ್ರದೇಶವನ್ನು ಉಪ ಮಾರುಕಟ್ಟೆ ಎಂದು ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಸಿಂಗೇನ ಅಗ್ರಹಾರ ಗ್ರಾಮದ ಸರ್ವೆ ನಂ.57, ಗೂಳಿಮಂಗಲ ಗ್ರಾಮದ ಸರ್ವೆ ನಂ. 135 ಮತ್ತು 141 ರಲ್ಲಿನ ಒಟ್ಟು 27.15 ಎಕರೆ ಜಮೀನನ್ನು ಹಣ್ಣುಗಳ ಸಗಟು ಮಾರಾಟ ನಿಯಂತ್ರಣಕ್ಕಾಗಿ ಉಪ ಮಾರುಕಟ್ಟೆ ಪ್ರಾಂಗಣವೆಂದು ಘೋಷಿಸಲಾಗಿದೆ.

ವ್ಯಾಪಾರ ವಹಿವಾಟು ವೃದ್ಧಿಯಾಗುತ್ತಿದ್ದು, ಲೈಸೆನ್ಸ್ ಪಡೆದ ವರ್ತಕರಿಗೆ ಹಾಗೂ ರೈತರಿಗೆ ಹೆಚ್ಚುವರಿಯಾಗಿ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಗೂಳಿಮಂಗಲ ಗ್ರಾಮದ ವಿವಿಧ ಸರ್ವೆ ನಂಬರ್ ಗಳಾದ 69, 106/1, 106/2, 142, 143, 144, 145, 146 ಗಳಲ್ಲಿ 42.12 ಎಕರೆ ಮತ್ತು ಖರಾಬು 0.19 ಗುಂಟೆ ಒಟ್ಟು 42.31 ಎಕರೆ ಜಮೀನನ್ನು ಭೂಸ್ವಾಧೀನ ಮೂಲಕ ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಇವರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಹಣ್ಣು ಮತ್ತು ತರಕಾರಿಗಳ ವಹಿವಾಟಿಗೆ ಸೌಲಭ್ಯವನ್ನು ಕಲ್ಪಿಸಲು ಭೂಸ್ವಾಧೀನ ಮೂಲಕ ಪಡೆದಿರುವ 42.31 ಎಕರೆ ಜಮೀನಿನಲ್ಲಿ ಕ್ರಮ ವಹಿಸಿದ್ದು, ಹಾಲಿ ಇರುವ ಪ್ರಾಂಗಣದ ವಿಸ್ತರಣೆಗಾಗಿ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸ್ವಾಧೀನಪಡಿಸಿಕೊಂಡಿರುವ ಕೆಳಕಂಡ ಚೆಕ್‌ಬಂದಿಯನ್ನೊಳಗೊಂಡ ಪ್ರದೇಶವನ್ನು ಅಧಿಕೃತವಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 6(3)ರಡಿಯಲ್ಲಿ ಕ್ರಮ ವಹಿಸಬೇಕಿರುತ್ತದೆ.

ಆದ್ದರಿಂದ, ವಿಸ್ತರಣೆಗಾಗಿ 42.31 ಎಕರೆ ಜಮೀನನ್ನು ಈ ಕೆಳಕಂಡ ಚೆಕ್‌ಬಂದಿಯೊಂದಿಗೆ ಹಣ್ಣು ಮತ್ತು ತರಕಾರಿಗಳ ಉತ್ಪನ್ನದ ವಹಿವಾಟಿಗಾಗಿ ಘೋಷಣೆ ಮಾಡಲು ಉದ್ದೇಶವನ್ನು ಪ್ರಕಟಿಸಿದ್ದು, ಸದರಿ ಅಧಿಸೂಚನೆಯಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ/ಸಲಹೆಯನ್ನು ಕನ್ನಡ ದಿನ ಪತ್ರಿಕೆಯಲ್ಲಿ ಪ್ರಕಟಣೆಗೊಂಡ 15 ದಿನಗಳೊಳಗಾಗಿ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು-560001 ಇವರಿಗೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದ ನಂತರದಲ್ಲಿ ಬರುವ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಗೂಳಿಮಂಗಳ ಗ್ರಾಮದ 42.31 ಎಕರೆ ಜಮೀನಿನ ಚೆಕ್‌ಬಂದಿ

ಸಿಂಗೇನ ಅಗ್ರಹಾರ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಗೂಳಿಮಂಗಲ ಗ್ರಾಮದ ವಿವಿಧ ಸರ್ವೆ ನಂಬರ್ ಗಳಾದ 69, 106/1, 106/2, 142, 143, 144, 145, 146 ಗಳಲ್ಲಿ 42.12 ಎಕರೆ ಮತ್ತು ಖರಾಬು 0.19 ಗುಂಟೆ ಒಟ್ಟು 42.31 ಎಕರೆ ಜಮೀನಿನ ಈ ಕೆಳಗಿನ ಸೀಮಾಬದ್ಧ ಸ್ಥಳ:

ಪೂರ್ವಕ್ಕೆ : ಖಾಸಗಿ ಸ್ವತ್ತು.
ಪಶ್ಚಿಮಕ್ಕೆ : ಸರ್ಕಾರಿ ರಸ್ತೆ.
ಉತ್ತರಕ್ಕೆ : ಖಾಸಗಿ ಲೇಔಟ್ ಮತ್ತು ಖಾಸಗಿ ಸ್ವತ್ತು.
ದಕ್ಷಿಣಕ್ಕೆ : ಸಿಂಗೇನ ಅಗ್ರಹಾರ ಮಾರುಕಟ್ಟೆ ಪ್ರಾಂಗಣ ಮತ್ತು ಖಾಸಗಿ ಸ್ವತ್ತು.

ನಿರ್ದೇಶಕರು

PR-395

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59.

THAMMAIAH